ಹಿಂಸೆಯ ಪರಿಸ್ಥಿತಿಯಲ್ಲಿ ಸಮಾಧಾನ

ಸೆಪ್ಟೆಂಬರ್ 22, 2019, ಭಾನುವಾರ

ಸಮಾಧಾನ ಪಡಿಸುವವರು ಧನ್ಯರು

– ಘನ॥ ಸಿಲ್ವನ್ ಚಂದ್ರಕುಮಾರ್ ಎ

– ಅನುವಾದ ಸಹೋ॥ ಜೇಮ್ಸ್ ಸಿ ಮುತ್ತಲಗೇರಿ

'ಸಮಾಧಾನ ಪಡಿಸುವವರು ಧನ್ಯರು; ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು'. 'ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ', ಎಂಬದಾಗಿ ರೋಮಾ 12:18ನೇ ವಚನದಲ್ಲಿ ನೋಡುತ್ತೇವೆ. ಯೇಸು ಕ್ರಿಸ್ತನ ಸುವಾರ್ತೆಯು ಸಮಾಧಾನದ ಸುವಾರ್ತೆಯಾಗಿರುತ್ತದೆ. **'ಸಮಾಧಾನ'** ಎಂಬ ಪದವು ಸತ್ಯವೇದದಲ್ಲಿ ಸುಮಾರು **429** ಸಾರಿ ಉಪಯೋಗಿಸಲ್ಪಟ್ಟಿರುತ್ತದೆ. ಆದಿಕಾಂಡ 15:15 ನೇ ವಚನದಲ್ಲಿ ಮೊಟ್ಟಮೊದಲನೆಯ ಸಾರಿ ಕಾಣಿಸಿಕೊಳ್ಳುವ, **"**ನೀನಂತೂ ಸಮಾಧಾನದೊಡನೆ ಪಿತೃಗಳ ಬಳಿಗೆ ಸೇರುವಿ**"**, ಎಂಬದಾಗಿ ನೋಡುತ್ತೇವೆ. ರೋಮಾ 14:19; ಯಾಕೋಬ 3:18; ಯೋಹಾನ 14:27; 1 ಥೆಸಲೋನಿಕ 5:13 ನೋಡಿರಿ.

ಇಂದಿನ ದಿನದ ಅಕ್ರಮ ಪರಿಸ್ಥಿತಿಯಲ್ಲಿ, ನಮ್ಮ ಸುತ್ತುಮುತ್ತಲಿನಲ್ಲಾಗಲಿ ಜಾಗತಿಕವಾಗಲಿ ವಿವಿಧ ರೀತಿಯಲ್ಲಿ ಹಿಂಸೆಯು ಪ್ರದರ್ಶನಗೊಳ್ಳುತ್ತಿರುವದನ್ನು ನೋಡುತ್ತೇವೆ. ಭಯೋತ್ಪಾದನೆ, ಅಂತರ–ಸಮುದಾಯ ಕಲಹ, ಭಾಷಾ ಕೋಮುವಾದ, ಜಾತಿ ಹಗೆತನದಿಂದ ಪ್ರೇರಿತಗೊಂಡ ಯುದ್ಧಗಳ ಘಟನೆಗಳು, ಅವುಗಳೊಂದಿಗೆ ಅನುದಿನವೂ ನೆರೆಹೊರೆಯವರೊಂದಿಗೆ ಸಂಭವಿಸುವ ಘರ್ಷಣೆಗಳು, ಕೌಟುಂಬಿಕ ಹಿಂಸಾಚಾರ, ಲೈಂಗಿಕ ಹಿಂಸೆ, ಶಿಶು ದೌರ್ಜನ್ಯ, ಯುವಕರ ನಡುವಿನ ಹಿಂಸೆ, ವಯಸ್ಸಾದವರ ನಡುವಿನ ಹಿಂಸೆ, ತಂತ್ರಜ್ಞಾನ ನೆರೆವಿನ ನಿಂದನೆ ಈ ಮುಂತಾದವುಗಳು ನಮಗೆ ಕಂಡುಬರುವ ಹಾಗೂ ಕೇಳಿ ಬರುವ ಹಿಂಸಾತ್ಮಕ ಸಂಗತಿಗಳಾಗಿರುವವು. ಮಕ್ಕಳಿಂದ ಹಿಡಿದು ವಯಸ್ಸಾದವರು ತಮ್ಮನ್ನು ವಿವಿಧ ಹಿಂಸಾತ್ಮಕ ವಿಡಿಯೋ ಆಟಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. **"**ಹಿಂಸಾತ್ಮಕವಾಗುವದು ಮತ್ತು ಹಾಗಿರುವದು**"**, ಎಂಬದು ಒಂದು ರೀತಿಯಲ್ಲಿ ಇಂದಿನ ಫ್ಯಾಶನ್ ಹೇಳಿಕೆಯಾಗಿದೆ. ಇಂದು ಮಾರುಕಟ್ಟೆಯಲ್ಲಿ ಹಿಂಸೆಯು ಮನರಂಜನೆಯ ವೇಷದಲ್ಲಿ ಮಾರಲ್ಪಡುತ್ತಾಯಿದೆ.

ಇಂದಿನ ವೇದಭಾಗವು, ಇಂದಿನ ವೈಯಕ್ತಿಕ ಜೀವಿತಗಳ, ಕುಟುಂಬದ, ಸಭೆಯ, ಸಮಾಜದ ಮತ್ತು ರಾಜಕರಣದ ಪರಿಸ್ಥಿತಿಗಳನ್ನು ಪರಿಗಣಿಸಿ ಅವುಗಳಿಗೆ ಸಂಬಂಧಿಸುವ ಅತ್ಯಂತ ಮಹತ್ವಪೂರ್ಣವಾದ ವಿಷಯವನ್ನು ಹೊಂದಿರುತ್ತದೆ.

ಹಳೇ ಮತ್ತು ಹೊಸ ಒಡಂಬಡಿಕೆಯ ಕೆಲವು ವೇದಭಾಗಗಳಲ್ಲಿ ಸಮಾಧಾನವು ಬಹುಆಯಾಮದ ಪರಿಕಲ್ಪನೆಯನ್ನು ಹೊಂದಿರುತ್ತದೆ. ಅದನ್ನು ನಕಾರಾತ್ಮಕ ಸಮಾಧಾನ ಮತ್ತು ಸಕಾರಾತ್ಮಕ ಸಮಾಧಾನ ಎಂಬ ಎರಡು ಭೂತಗನ್ನಡಿಗಳ ಮೂಲಕ ನೋಡಬಹುದು. **ಸಕಾರಾತ್ಮಕ ಸಮಾಧಾನ:** ರಚನಾತ್ಮಕ ಏಕೀಕರಣ, ಆಶಾವಾದಿ, ತಡೆಗಟ್ಟುವಿಕೆಯ ಶಾಂತಿಯುತ ಸಾಧನದಿಂದ ಸಮಾಧಾನ. **ನಕಾರಾತ್ಮಕ ಸಮಾಧಾನ:** ಹಿಂಸೆಯ ಅನುಪಸ್ಥಿತಿ, ನಿರಾಶಾವಾದಿ, ರೋಗನಿವಾರಕ, ಯಾವಾಗಲೂ ಶಾಂತಿಯು ಸಾಧನದಿಂದಲೇ ಆಗದ ಸಮಾಧಾನ. **ಸಕಾರಾತ್ಮಕ ಸಮಾಧಾನವು** ದೈವಿಕ, ಸಾಮರಸ್ಯ ಸಾಮಾಜಿಕ ಸಂಬಂಧಗಳ ಮತ್ತು ಮಾನವ ಸಮಾಜದ ಏಕೀಕರಣ ಎಂಬಿವುಗಳ ಉಪಸ್ಥಿತಿಯಿಂದ ನಿರೂಪಿಸಲ್ಪಟ್ಟಿರುತ್ತದೆ.

ಇಂದಿನ ವೇದಭಾಗಗಳನ್ನು ಹಿಂಸೆಯ ಪರಿಸ್ಥಿತಿಯಲ್ಲಿ ಸಮಾಧಾನ ಪಡಿಸುವ ಚಾಲನಾ ಶಕ್ತಿಯನ್ನಾಗಿ ನೋಡಿಕೊಂಡು ಅವುಗಳ ಮೂಲಕ ಸಮಾಧಾನ ಪಡಿಸುವ ತಂತ್ರಗಳನ್ನು ಕಂಡುಕೊಳ್ಳೋಣ.

- **ಸಮಾಧಾನ – ಸಂಘರ್ಷವನ್ನು ನಿಭಾಯಿಸಲು ಸಾಮರ್ಥ್ಯ – 1 ಸಮುವೇಲ 24:1–12**
    1. **ನಿಮ್ಮನ್ನು ಎದುರಿಸುವವರಿಗೆ / ವಿರೋಧಿಸುವವರಿಗೆ ಹಾನಿ ಮಾಡುವದನ್ನು ತಡೆಯಿರಿ – (ವಚನ 4–7)**
    2. **ಸಮಾಧಾನವಾಗುವದರಲ್ಲಿ ನೀವು ಮೊದಲ ಹೆಜ್ಜೆಯನ್ನಿಡಿರಿ – (ವಚನ 8–15)**
    3. **ಒಬ್ಬರಿಗೊಬ್ಬರು ಒಳ್ಳೆಯದನ್ನು ಮಾಡಲು ಒಪ್ಪಿಕೊಳ್ಳಿರಿ – (ವಚನ 16–22)**

    ದಾವೀದನು ಯಾವಾಗಲೂ ಒಬ್ಬ ಪರಿಪೂರ್ಣ ಮಾದರಿಯಾಗಿರುವದಿಲ್ಲ. ಹೇಗೂ ಅವನ ಕ್ರಿಯೆಗಳು ಸಂಘರ್ಷವನ್ನು ನಿಭಾಯಿಸಲು ಅಥವಾ ನಿರ್ವಹಿಸಲು ಹೊಂದಾಣಿಕೆ, ಸೃಜನಶೀಲತೆ ಮತ್ತು ಅಹಿಂಸೆಯ ಸಾಧನದ ಮೂಲಕ ಇರುವ ಸಾಮರ್ಥ್ಯವೆಂಬಂತೆ ವ್ಯಾಖ್ಯಾನಿಸುತ್ತವೆ.

- **ಸಮಾಧಾನ ಕೆಲಸ ಅಥವಾ ಕಾರ್ಯ ಅಂದರೇನು? ಮತ್ತಾಯ 5:38–48**

    'ನಿಮಗೆ ಪ್ರೀತಿ ತೋರಿಸುವವರನ್ನೇ ನೀವು ಪ್ರೀತಿಸಿದರೆ ಫಲವೇನು? ... ನಿಮ್ಮ ಸಹೋದರರಿಗೆ ಮಾತ್ರ ನೀವು ಮರ್ಯಾದೆಕೊಟ್ಟರೆ ಏನು ಹೆಚ್ಚು ಮಾಡಿದ ಹಾಗಾಯಿತು? (ಮತ್ತಾಯ 5:46,47)

    ಒಂದು ಉತ್ತಮ ಮಾದರಿಯಾಗಿ ಯೇಸು ಕ್ರಿಸ್ತನು ನಮಗೆ ತನ್ನ ಸಮಾಧಾನವನ್ನು ಕೊಡುವದಾಗಿ ವಾಗ್ದಾನ ಮಾಡಿದ್ದಾನೆ (ಯೋಹಾನ 14:27)

    ಮತ್ತಾಯ 5:38–48 ವಚನಗಳಲ್ಲಿ **ಯೇಸು ಕ್ರಿಸ್ತನು** ಈ ಸಮಾಧಾನದ ಕೆಲಸ ಅಥವಾ ಕಾರ್ಯಕ್ಕಾಗಿ ಹಲವು ಮೂಲ ಪರಿಕಲ್ಪನೆಗಳನ್ನು **ಕಲಿಸಿಕೊಟ್ಟಿರುವನು**. ಸಮಾಧಾನವು ಕೇವಲ ಹಿಂಸೆಯ ಅನುಪಸ್ಥಿತಿ ಅಷ್ಟೇ ಆಗಿರುವದಿಲ್ಲ ಆದರೆ ಸಾಮರಸ್ಯದ ಸಕಾರಾತ್ಮಕ ಸ್ಥಿತಿಯಾಗಿರುತ್ತದೆ ಎಂದು ಆತನು ವ್ಯಾಖ್ಯಾನಿಸಿರುತ್ತಾನೆ.

- **ಸಮಾಧಾನವು ಸಂಪೂರ್ಣ ಸಾಮರಸ್ಯದ ಸ್ಥಿತಿಯಾಗಿರುತ್ತದೆ – ರೋಮಾ 12:14–21**

'ಒಬ್ಬರೊಟ್ಟಿಗೊಬ್ಬರು ಸಾಮರಸ್ಯದಿಂದಿರಿ (ಸಮಾಧಾನದಿಂದಿರಿ)'

ಸಮಾಧಾನ ಮತ್ತು ಸಾಮರಸ್ಯಗಳು ಸಭೆ ಹಾಗೂ ಸಮಾಜದಲ್ಲಿ ಸ್ಥಿರವಾದ ಕ್ರಮವನ್ನು ತರಲು ಸಾಧ್ಯ ಮತ್ತು ಅವು ಜನರು ಬದುಕುಳಿಯುವ ಹಾಗೂ ಅಭಿವೃದ್ಧಿಯ ಅವಶ್ಯಕ ಸ್ಥಿತಿಯಾಗಿರುತ್ತವೆ. ಉದಾಹರಣೆ: ತನ್ನ ಸಹೋದರರು ತನಗೆ ಕೇಡನ್ನು ಮಾಡಿದ್ದಾಗ್ಯೂ ಯೋಸೇಫನು ಅವರಿಗೆ ಒಳ್ಳೆಯದನ್ನೇ ಮಾಡಿದನು. ಅವರಿಗೆ ಮುಯ್ಯಿ ತೀರಿಸುವ ಬದಲಾಗಿ ಅವನು ಅವರಿಗೆ ಕ್ಷಮಾಮಾಪಣೆಯನ್ನು ನೀಡಿ ಅವರೊಂದಿಗೆ ಸಮಾಧಾನ ಮಾಡಿಕೊಂಡನು. (ಆದಿಕಾಂಡ 45:1–15). ಯೋಸೇಫನ ಸಮಾಧಾನಕಟ್ಟುವಿಕೆಯು ಅಹಿಂಸಾ ಮಾರ್ಗಗಳಲ್ಲಿ ಅನ್ಯಾಯವನ್ನು ಪರಿಹರಿಸಲು ಮತ್ತು ಮಾರಕ ಹಾಗೂ ನಾಶಕಾರಕ ಹಿಂಸೆಯನ್ನು ಉತ್ಪಾದಿಸುವ ಸ್ಥಿತಿಗತಿಗಳನ್ನು ಮಾರ್ಪಡಿಸಲು ಗುರಿಯಾಗಿಟ್ಟುಕೊಂಡಿರುವ ಕ್ರಿಯೆಯಾಗಿ ಕಂಡುಬರುತ್ತದೆ.

ರೋಮಾ 12:21 – 'ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ', ಎಂಬ ಎಚ್ಚರಿಕೆಯ ಉಪದೇಶವನ್ನು ನಮಗೆ ನೀಡುತ್ತದೆ. ಕೆಟ್ಟತನಕ್ಕೆ ಬದಲಾಗಿ ಒಳ್ಳೆಯದನ್ನು ಮಾಡುವದು ಎರಡನೆಯ ಮೈಲು ನಡೆಯುವದಾಗಿರುತ್ತದೆ.

ಸಮಾಧಾನ – ಸತ್ಯವೇದದಲ್ಲಿ ಇದಕ್ಕೆ ಇರುವ ಇಬ್ರಿಯ ಪದವು – ಶಾಲೋಮ್ ಮತ್ತು ಇದರ ವಿಸ್ತಾರವಾದ ಅರ್ಥವು – ಒಟ್ಟು ಮೊತ್ತದ ಅಥವಾ ಸಂಪೂರ್ಣತೆಯ ಕಲ್ಪನೆಗಳು, ಯಶಸ್ಸು, ನೆರವೇರಿಕೆ, ಪರಿಪೂರ್ಣತೆ, ಸಾಮರಸ್ಯ, ಸಂರಕ್ಷಣೆ ಮತ್ತು ಯೋಗಕ್ಷೇಮ – ಇವೆಲ್ಲವುಗಳನ್ನೂ ಒಳಗೊಂಡಿರುತ್ತದೆ. ಹಳೇ ಒಡಂಬಡಿಕೆಯಲ್ಲಿ ಸಮಾಧಾನವು – ಸ್ವಾತಂತ್ರ್ಯ, ಪರಿಪೂರ್ಣತೆ ಮತ್ತು ಯೋಗಕ್ಷೇಮ ಎಂಬ ಅರ್ಥಗಳನ್ನು ಹೊಂದಿರುತ್ತದೆ. ಸಮಾಧಾನವು ಪ್ರತಿಕೂಲದ ಸಂದರ್ಭಗಳಲ್ಲಿಯೂ ಎಡವಿ ಬೀಳದ ಮನಸ್ಸಿನ ಸಂತೋಷದ ಸ್ಥಿತಿಯಾಗಿರುತ್ತದೆ.

ಶಾಲೋಮ್ – ಮತ್ತೊಬ್ಬರ ಯೋಗಕ್ಷೇಮಕ್ಕಾಗಿ ಪ್ರಾರ್ಥಿಸುವಾಗ – (ಆದಿಕಾಂಡ 43:27; ವಿಮೋಚನಾಕಾಂಡ 4:18; ನ್ಯಾಯಸ್ಥಾಪರು 19:20) ಮತ್ತು ಮತ್ತೊಬ್ಬರೊಂದಿಗಿನ ಅನ್ಯೋನ್ಯತೆಯನ್ನುದ್ದೇಶಿಸಿ ಹೇಳುವಾಗ – (1 ಅರಸುಗಳು 5:12) ಉಪಯೋಗಿಸಲ್ಪಡುತ್ತದೆ. ಶಾರೀರಿಕ ಸಂರಕ್ಷಣೆ ಮತ್ತು ಸಮಾಧಾನ (ಕೀರ್ತನೆ 4:8) ಸಮಾಧಾನವು ದೇವರ ವರವಾಗಿದೆ ಮತ್ತು ಪವಿತ್ರಾತ್ಮನ ಫಲವಾಗಿರುತ್ತದೆ (ಗಲಾತ್ಯ 5:22) ಮೆಸ್ಸೀಯನ ಆಳಿಕೆಯ ಸಮಯವು ಸಮಾಧಾನದ ಸಮಯವಾಗಿರುತ್ತದೆ (ಯೆಶಾಯ 2:2,4; 11:1–9; ಹಗ್ಗಾಯ 2:7–9)

ಸಮಾಧಾನದಿಂದಿರಿ ಮತ್ತು ಶಾಂತಿಯನ್ನು ಕೊಡುವ ದೇವರು ನಿಮ್ಮ ಸಂಗಡ ಇರುವನು (2 ಕೊರಿಂಥ 13:11)

ಸಮಾಧಾನದಲ್ಲಿರಬೇಕೆಂದು ದೇವರು ನಮ್ಮನ್ನು ಕರೆದಿದ್ದಾನೆ (1 ಕೊರಿಂಥ 7:15)

ನಾವು ಒಬ್ಬರ ಸಂಗಡ ಒಬ್ಬರು ಸಮಾಧಾನದಿಂದಿರಬೇಕೆಂದು ಹೊಸ ಒಡಂಬಡಿಕೆಯು ಕಲಿಸುತ್ತದೆ.

ಮಾನವನ ಅಹಂ (ego) – ಇತರರಿಗಿಂತ ತನ್ನನ್ನೇ ಹೆಚ್ಚಾಗಿ ಎತ್ತಿಹಿಡಿದುಕೊಳ್ಳುವದು ಎಂಬ ಗುಂಡಿ ಅಥವಾ ಹಳ್ಳವು ಹಿಂಸೆಯ ಅತೀ ದೊಡ್ಡ ಮೂಲವಾಗಿರುತ್ತದೆ.

ಮೊದಲನೆಯದಾಗಿ, ಭಾರತೀಯ ವಿಚಾರದಲ್ಲಿ, ಅಹಿಂಸೆಯು ಅತ್ಯಂತ ಮೂಲಭೂತ ಮೌಲ್ಯವಾಗಿರುತ್ತದೆ. ಎರಡನೆಯದಾಗಿ, ಪರಿಹಾರವು, ನಮ್ಮ ಸಮಾನತೆಗಳನ್ನು ಗ್ರಹಿಸಿಕೊಂಡು ಅವುಗಳಿಗೆ ಪ್ರಾಧಾನ್ಯತೆ ಕೊಡುವದರಲ್ಲಿ, ಪರಸ್ಪರ ಸಂಬಂಧ, ನಿಷ್ಪಕ್ಷಪಾತ ಮತ್ತು ಸ್ನೇಹಪರತೆ ಹಾಗೂ ನಮ್ಮ ಪರಸ್ಪರ ಅವಲಂಬನೆ.

<u>ಅಸ್ಸಿಸಿಯ ಸೆಂಟ್ ಫ್ರಾನ್ಸಿಸ್‌ರವರ ಪ್ರಾರ್ಥನೆ</u> – ಕರ್ತನೇ, ನನ್ನನ್ನು ಶಾಂತಿಯ ಸಾಧನವನ್ನಾಗಿ ಮಾಡು. ಹಗೆತನವಿದ್ದಲ್ಲಿ ಪ್ರೀತಿಯನ್ನು, ನೋವು ಇದ್ದಲ್ಲಿ ಕ್ಷಮೆಯನ್ನು, ಅಪಶೃತಿಯಿದ್ದಲ್ಲಿ ಒಕ್ಕಟ್ಟನ್ನು, ಸಂದೇಹವಿದ್ದಲ್ಲಿ ನಂಬಿಕೆಯನ್ನು, ಹತಾಶೆಯಿದ್ದಲ್ಲಿ ನಿರೀಕ್ಷೆಯನ್ನು, ಕತ್ತಲೆಯಿದ್ದಲ್ಲಿ ಬೆಳಕನ್ನು ಮತ್ತು ದುಃಖವಿದ್ದಲ್ಲಿ ಉಲ್ಲಾಸವನ್ನು ನಾನು ಬಿತ್ತುವಂತೆ ಸಹಾಯ ಮಾಡು. ಆಮೆನ್.

ನಿಮ್ಮೆಲ್ಲರಿಗೂ ಸಮಾಧಾನ ತುಂಬಿದ ಭಾನುವಾರವನ್ನು ಹಾರೈಸುತ್ತೇನೆ!